**ದಿಃ 16-06-2026** ರಂದು ಸಾಕ್ಷಿಯನ್ನು **ಕರೆಸಿ ಪ್ರತಿಜ್ಞೆ ಮಾಡಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ**

ಏನು ಇಲ್ಲ

ಪಾಟೀಸ ವಾಲುಃ

(1 ನೇ ಎದುರುದಾರ ಏಕತರ್ಫಿ ಆಗಿದ್ದು ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು)

ಪಾಟೀ ಸವಾಲುಃ **3** ನೇ ಎದುರುದಾರರ ಪರ ಶ್ರೀ ಎನ್ ಎಸ್ ಯು ವಕೀಲರಿಂದಃ

ಅಪಘಾತವು ಟ್ರಕ್ ಚಾಲಕನ ತಪ್ಪಿನಿಂದ ಆಗಿರುತ್ತದೆ ಅಂದರೆ ನಿಜ. ನಾವು ಪ್ರಯಾಣಿಸುತ್ತಿದ್ದ ಟಾಟಾ ಯೇಸ್ ವಾಹನ ಚಾಲಕ ವಾಹನವನ್ನು ರಸ್ತೆ ಪಕ್ಕ ನಿಲ್ಲಿಸಿದ್ದ ಅಂದರೆ ನಿಜ. ನಮ್ಮ ವಾಹನದ ಹಿಂಬಾಗದಲ್ಲಿ ಮೋಟರ ಸೈಕಲ ಸವಾರ ಬರುತ್ತಿದ್ದು ಆತನನ್ನು ತಪ್ಪಿಸುವ ಸಲುವಾಗಿ ಟ್ರಕ್ ಚಾಲಕ ನಮ್ಮ ವಾಹನದ ಹಿಂಬಾಗಕ್ಕೆ ಡಿಕ್ಕಿ ಪಡಿಸಿದ್ದರಿಂದ ನನಗೆ

ಹಾಗೂ ಇತರರಿಗೆ ಗಾಯಗಳಾಗಿರುತ್ತವೆ ಅಂದರೆ ನಿಜ. ಅಪಘಾತಕ್ಕೆ 3 ನೇ ಎದುರುದಾರನ ಯಾವುದೆ ತಪ್ಪು ಇರುವುದಿಲ್ಲ ಅಂದರೆ ನಿಜ.

<u>ಪಾಟೀ ಸವಾಲುಃ **2** ನೇ ಎದುರುದಾರರ ಪರ ಶ್ರೀಮತಿ ಸಿ ಕೆ ವಕೀಲರಿಂದಃ</u>

ನಾನು ಸಲ್ಲಿಸಿದ ಅರ್ಜಿ ಹಾಗೂ ಮುಖ್ಯ ವಿಚಾರಣೆಗೆ ನಾನೆ ಮಾಹಿತಿ ನೀಡಿದ್ದೇನೆ. ಅದರಲ್ಲಿರುವ ವಿಷಯ ಸತ್ಯವಾಗಿದೆ. ಅಪಘಾತವಾದ ದಿನದಂದು ನಾವು ಟಾಟಾಯೇಸ್ ಗೂಡ್ಸ್ ವಾಹನ ನಂ ಕೆಎ 25/ಡಿ 9814 ರಲ್ಲಿ ಹೋಗುತ್ತಿದ್ದೆವು ಅಂದರೆ ನಿಜ. ಸದರಿ ವಾಹನದಲ್ಲಿ ಪ್ರಯಾಣಿಕರ ಸಾಗಾಟಕ್ಕೆ ನಿಷೇದಿಸಲಾಗಿದೆ ಅಂದರೆ ನಿಜ. ನನ್ನ ಪ್ರಮಾಣ ಪತ್ರದಲ್ಲಿ ನಾವು ಪ್ರಯಾಣಿಸುತ್ತಿದ್ದ ವಾಹನ ಚಾಲಕ ವಾಹನವನ್ನು ವೇಗವಾಗಿ ಚಲಾಯಿಸಿಕೊಂಡು ಹೋಗುತ್ತಿದ್ದ ಎಂದು ತಿಳಿಸಿದ್ದೇನೆ ಅಂದರೆ ನಿಜ. ಅಪಘಾತದ ಬಗ್ಗೆ ರಾದಾ ಎನ್ನುವವರು ದೂರು ನೀಡಿದ್ದು ಸದರಿಯವರು ನಮ್ಮ ಜೊತೆಗೆ ಪ್ರಯಾಣಿಸುತ್ತಿದ್ದ ಗಾಯಾಳು. ಪೋಲೀಸರು ಯಾರ ವಿರುದ್ಧ ದೂರು ಸಲ್ಲಿಸಿದ್ದಾರೆ ಎನ್ನುವದು ಗೊತ್ತಿದೆ. ಪೋಲೀಸರು ಸಲ್ಲಿಸಿದ ಆಪಾದನೆ ಪತ್ರದಲ್ಲಿ 3 ನೇ ಎದುರುದಾರ ವಾಹನದ ಚಾಲಕನನ್ನು ಮೊದಲನೆ ಆರೋಪಿಯನ್ನಾಗಿ ಮಾಡಿದ್ದಾರೆ ಅಂದರೆ ನಿಜ. ಟ್ರಕ್ಕ ಚಾಲಕನನ್ನು 2 ನೇ ಆರೋಪಿಯನ್ನಾಗಿ ಮಾಡಿದ್ದಾರೆ ಅಂದರೆ ನಿಜ. ಮೋಟರ ಸೈಕಲ ಸವಾರನನ್ನು 3 ನೇ ಆರೋಪಿಯನ್ನಾಗಿ ಮಾಡಿದ್ದಾರೆ ಅಂದರೆ ನಿಜ. ಮೋಟರ ಸೈಕಲ ವಾಹನದ ಮಾಲೀಕನನ್ನು 4 ನೇ ಆರೋಪಿಯನ್ನಾಗಿ ಮಾಡಿದ್ದಾರೆ ಅಂದರೆ ನಿಜ.

ಪೋಲೀಸರು ಸಲ್ಲಿಸಿದ ದಾಖಲೆಗಳ ಪ್ರಕಾರ ಮೂರು ವಾಹನಗಳು ಅಪಘಾತದಲ್ಲಿ ಭಾಗಿಯಾಗಿವೆ ಅಂದರೆ ನಿಜ. ನಾವು ಪ್ರಯಾಣಿಸುತ್ತಿದ್ದ ಗೂಡ್ಸ್ ವಾಹನದಲ್ಲಿ ಕುಳಿತುಕೊಳ್ಳಲು ಆಸನದ ವ್ಯವಸ್ಥೆ ಇರುವುದಿಲ್ಲ ಆದರೆ ನಾವು ಅದರಲ್ಲಿ ಕುಳಿತುಕೊಂಡಿದ್ದೆವು. ನಮಗೆ ಹಿಂದೆ ಹಾಗೂ ಮುಂದೆ ಬರುತ್ತಿದ್ದ ವಾಹನಗಳು ಕಾಣುತ್ತಿರಲಿಲ್ಲ ಅಂದರೆ ಸರಿಯಲ್ಲ. ಪೋಲೀಸರು ಸಲ್ಲಿಸಿದ ದಾಖಲೆಗಳ ಪ್ರಕಾರ ಅಪಘಾತವು ನಾವು ಪ್ರಯಾಣಿಸುತ್ತಿದ್ದ ವಾಹನ ಚಾಲಕನ ನಿರ್ಲಕ್ಷತದಿಂದ ಆಗಿದೆ ಅದರೆ ಸರಿಯಲ್ಲ. ಗೂಡ್ಸ್ ಚಾಲಕನ ಅತೀ ವೇಗ ಹಾಗೂ ನಿರ್ಲಕ್ಷತನದಿಂದ ಅಪಘಾತ ಆಗಿದ್ದರೂ ಕೂಡಾ ನಮಗೆ ಪರಿಹಾರ ಸಿಗುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನನಗೆ ಪ್ರಕರಣದ ಬಗ್ಗೆ ಮಾಹಿತಿ ಇದ್ದರೂ ಕೂಡಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಗೂಡ್ಸ್ ವಾಹನದಲ್ಲಿ ನಾನು ಪ್ರಯಾಣಿಸುತ್ತಿದ್ದು ಪರಿಹಾರಧನ ಸಿಗುವುದಿಲ್ಲ ಎಂದು ಅಪಘಾತವು ಟ್ರಕ್ ಚಾಲಕ ತಪ್ಪಿನಿಂದ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಅಪಘಾತದಲ್ಲಿ ಮೋಟರ ಸೈಕಲ ಸವಾರನ ತಪ್ಪು ಕೂಡಾ ಇದೆ ಅಂದರೆ ನಿಜ. ಮೋಟರ ಸೈಕಲ ಸವಾರನಿಗೆ ಹಾಗೂ ನಾವು ಪ್ರಯಾಣಿಸುತ್ತಿದ್ದ ಮೋಟರ ಚಾಲಕನಿಗೆ ವಾಹನ ಚಾಲನಾ ಪರವಾನಿಗೆ ಇರಲಿಲ್ಲ ಆದ್ದರಿಂದ ನಾನು ಪರಿಹಾರ ಪಡೆದುಕೊಳ್ಳಲು ಹಕ್ಕುದಾರಳು ಅಲ್ಲ ಅಂದರೆ ಸರಿಯಲ್ಲ. ಅಪಘಾತಕ್ಕೆ 1 ನೇ ಎದುರುದಾರನ ತಪ್ಪು ಇರುವುದಿಲ್ಲ ಆದ್ದರಿಂದ

2 ನೇ ಎದುರುದಾರ ಪರಿಹಾರ ನೀಡಲು ಬಾಧ್ಯಸ್ಥನಲ್ಲ ಅಂದರೆ ಸರಿಯಲ್ಲ. ಮೋಟರ ಸೈಕಲ ವಾಹನ ಮಾಲೀಕ ಹಾಗೂ ವಿಮೆದಾರನನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಆದ್ದರಿಂದ ನಾವು ಪರಿಹಾರ ಪಡೆದುಕೊಳ್ಳಲು ಹಕ್ಕುದಾರಳು ಅಲ್ಲ ಅಂದರೆ ಸರಿಯಲ್ಲ.

ಅಪಘಾತದಲ್ಲಿ ನನಗೆ ಭಾರಿ ಪ್ರಮಾಣದ ಗಾಯ ಹಾಗೂ ಮೂಳೆ ಮುರಿತ ಉಂಟಾಗಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಅಪಘಾತದಲ್ಲಿ ನನಗೆ ಸಾದಾ ಪ್ರಮಾಣದ ಗಾಯಗಳು ಆಗಿದ್ದವು ಅಂದರೆ ಸರಿಯಲ್ಲ. ಅಪಘಾತವಾದ ನಂತರ ನನ್ನನ್ನು ಕಲಘಟಗಿ ಸರಕಾರಿ ಆಸ್ಪತ್ರೆಗೆ ದಾಖಲಿಸಿದ್ದು ನಂತರ ಹುಬ್ಬಳ್ಳಿ ಕಿಮ್ಸ ಆಸ್ಪತ್ರೆಗೆ ದಾಖಲಿಸಿರುತ್ತಾರೆ. ಕಲಘಟಗಿ ಸರಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಮಾತ್ರ ನೀಡಿದ್ದಾರೆ. ಹುಬ್ಬಳ್ಳಿ ಕಿಮ್ಸ ಆಸ್ಪತೆರ ಸರಕಾರಿ ಆಸ್ಪತ್ರೆ. ಅಲ್ಲಿ ಉಚಿತ ಚಿಕಿತ್ಸೆ ಕೊಡುತ್ತಾರೆ, ಆದರೆ ನಾನು ನಂತರ ಎಸ್ ಡಿ ಎಂ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದೇನೆ. ನಾನು ಎಸ್ ಡಿ ಎಂ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡ ಬಗ್ಗೆ ದಾಖಲೆ ಹಾಜರ ಪಡಿಸಿಲ್ಲ ಈ ಬಗ್ಗೆ ನನ್ನ ಪ್ರಮಾಣ ಪತ್ರದಲ್ಲಿ ತಿಳಿಸಿಲ್ಲ ಅಂದರೆ ಸರಿಯಲ್ಲ. ಕಿಮ್ಸ ಆಸ್ಪತ್ರೆಯಲ್ಲಿ 15 ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದೇನೆಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಈ ಬಗ್ಗೆ ಯಾವುದೆ ದಾಖಲೆ ಹಾಜರ ಪಡಿಸಿಲ್ಲ ಅಂದರೆ ಸರಿಯಲ್ಲ. ಗಾಯದ ಪ್ರಮಾಣ ಪತ್ರ ಹೊರತು ಪಡಿಸಿ ಬೇರೆ ದಾಖಲೆಗಳನ್ನು ಹಾಜರ ಪಡಿಸಿಲ್ಲ ಅಂದರೆ ಸರಿಯಲ್ಲ. ಕಿಮ್ಸ ಆಸ್ಪತ್ರೆರಯಲ್ಲಿ ನಾನು ಶಸ್ತ್ರ ಚಿಕಿತ್ಸೆಗೆ ಒಳಗಾಗಿದ್ದು ರಾಡ್ ಅಳವಡಿಸಿದ್ದಾರೆಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಚಿಕಿತ್ಸೆ ಸಲುವಾಗಿ ಸುಮಾರು ರೂ 5 ಲಕ್ಷಗಳಷ್ಟು ಖರ್ಚು ಮಾಡಿದ್ದೇನೆಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಅಪಘಾತಕ್ಕಿಂತ ಮುಂಚೆ ಇದ್ದ ಹಾಗೆ ಈಗಲೂ ಓಡಾಡಿಕೊಂಡಿದ್ದೇನೆ ಅಂದರೆ ಸರಿಯಲ್ಲ. ನನಗೆ ಆದ ಅಂಗನ್ಯೂನ್ಯತೆ ಪ್ರಮಾಣ ಪತ್ರವನ್ನು ಹಾಜರ ಪಡಿಸಿಲ್ಲ. ಅಪಘಾತದಿಂದಾಗಿ ನನಗೆ ಮಾನಸಿಕ ಹಾಗೂ ದೈಹಿಕ ಹಿಂಸೆ ನೋವು ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ನಾನು ತಾರಿಹಾಳದ ಗಾರ್ಮೆಂಟ್ಸನಲ್ಲಿ ಕೆಲಸ ಮಾಡುತ್ತಿದ್ದೆ. ಈ ಬಗ್ಗೆ ದಾಖಲೆ ಹಾಜರ ಪಡಿಸಿಲ್ಲ ಅಂದರೆ ಸರಿ. ನಾನು ಯಾವುದೆ ಕೆಲಸ ಮಾಡುವುದಿಲ್ಲ ಆದದರಿಂದ ಈ ಬಗ್ಗೆ ದಾಖಲೆ ಹಾಜರ ಪಡಿಸಿಲ್ಲ ಅಂದರೆ ಸರಿಯಲ್ಲ. ನನಗೆ ಮೊದಲಿನಂತೆ ಯಾವುದೆ ಕೆಲಸ ಮಾಡಲು ಆಗುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಗಾರ್ಮೆಂಟ್ಸನಲ್ಲಿ ಸುಮಾರು 9 ವರ್ಷಗಳಿಂದೆ ಕೆಲಸ ಮಾಡುತ್ತಿದ್ದೇನೆ. ನನಗೆ ಇ ಪಿ ಎಸ್, ಪಿ ಎಫ್ ಹಾಗೂ ಇತರೆ ಸೌಲಭ್ಯ ಇರುವುದಿಲ್ಲ. ನಾನು ಯಾವುದೆ ಕೆಲಸ ಮಾಡುವುದಿಲ್ಲ ಆದರೂ ಕೂಡಾ ಕೆಲಸ ಮಾಡುತ್ತೇನೆಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

<u>ಪಾಟೀ ಸವಾಲುಃ **4** ನೇ ಎದುರುದಾರರ ಪರಃ</u>

********

ಎಂ ವಿ ಸಿ **ನಂ. 895/24**
**ಪಿ ಡಬ್ಲ್ಯೂ: 1**

**ಮರು ವಿಚಾರಣೆ:** ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಕಲಘಟಗಿ.